ಪರೀಕ್ಷಿತನಿಗೆ ಈ ವಿಷಯ ತಿಳಿದು ಆತಂಕಗೊಳ್ಳುತ್ತಾನೆ. ಕೊನೆಗೆ ಹಿರಿಯರ ಸಲಹೆಯ ಮೇರೆಗೆ ತನ್ನ ಸಿಂಹಾಸನವನ್ನು ಮಗ ಜನಮೇಜಯನಿಗೆ ಬಿಟ್ಟು ಕೊಟ್ಟು ಒಂದು ಎತ್ತರವಾದ ಸ್ತಂಭದ ಮೇಲೆ ಸೌಧವನ್ನು ನಿರ್ಮಿಸಿಕೊಂಡು ಅಲ್ಲಿ ಭಾಗವತ ಪುರಾಣಗಳನ್ನು ಕೇಳುತ್ತಾ ಕಾಲ ಕಳೆಯುತ್ತಿರುತ್ತಾನೆ. ಒಂದು ಕ್ರಿಮಿಯೂ ಪ್ರವೇಶಿಸಲಾಗದ ಆ ಅರಮನೆಯಲ್ಲಿ ತಾನು ಸುರಕ್ಷಿತವಾಗಿದ್ದೇನೆ ಎಂದುಕೊಂಡು ನಿರಾಳನಾಗಿದ್ದ ಪರೀಕ್ಷಿತ ಮಹಾರಾಜ.

ಶ್ರುಂಗಿಯ ಶಾಪವನ್ನು ಈಡೇರಿಸುವ ಹೊಣೆ ಸರ್ಪಗಳ ರಾಜ ತಕ್ಷಕನದ್ದಾಗಿತ್ತು. ಪರೀಕ್ಷಿತನ ಅರಮನೆಯನ್ನು ತಲುಪುವುದು ಅಸಾಧ್ಯವೆಂಬ ಪರಿಸ್ಥಿತಿಯಲ್ಲಿಯೂ ಅವನು ಆ ಕೆಲಸವನ್ನು ಮಾಡಲೇಬೇಕಿತ್ತು. ತನ್ನ ಪರಿವಾರದ ಕೆಲವು ಹಾವುಗಳನ್ನು ಬ್ರಾಹ್ಮಣರ ವೇಷದಲ್ಲಿ ಮಹಾರಾಜನ ಬಳಿಗೆ ತೆರಳುವಂತೆ ಆಜ್ಞಾಪಿಸಿದ ತಕ್ಷಕ. ಅವರು ಬುಟ್ಟಿಗಳಲ್ಲಿ ಹಣ್ಣುಗಳನ್ನು ಒಯ್ದು ರಾಜನಿಗೆ ಅರ್ಪಿಸುವಂತೆ ಹೇಳಿದ. ಬುಟ್ಟಿಯಲ್ಲಿದ್ದ ಹಣ್ಣುಗಳ ಪೈಕಿ ಒಂದರಲ್ಲಿ ಸಣ್ಣ ಹುಳುವಾಗಿ ತಾನು ಸೇರಿಕೊಂಡ. ಹೀಗೆ ಎಲ್ಲಾ ಸುರಕ್ಷಣಾ ವ್ಯವಸ್ಥೆ ಇದ್ದರೂ ತಕ್ಷಕ ಪರೀಕ್ಷಿತನ ಬಳಿ ಸಾಗಲು ಸಾಧ್ಯವಾಯಿತು. ರಾಜನು ಆ ಹಣ್ಣನ್ನು ತಿನ್ನಲು ಹೊರಟಾಗ ತನ್ನ ನಿಜ ರೂಪ ತೋರಿದ ತಕ್ಷಕ ಪರೀಕ್ಷಿತನನ್ನು ಕಚ್ಚಿದ. ಕೊನೆಗೂ ತಕ್ಷಕನಿಂದ ಪರೀಕ್ಷಿತನಿಗೆ ಮರಣಪ್ರಾಪ್ತಿಯಾಗಿ, ಮಹಾರಾಜನು ವೈಕುಂಠಲೋಕಕ್ಕೆ ತೆರಳುತ್ತಾನೆ.

ಮೊನ್ನೆ ಸೀನನ ಫೋನ್ ಬಂತು. ತುಂಬಾ ಆತಂಕದಲ್ಲಿ ಇದ್ದ ಹಾಗಿತ್ತು ಅವನ ಧ್ವನಿ. ''ಏನಾಯ್ತೋ ಸೀನ? ಯಾಕಿಷ್ಟು ಗಾಬರಿ ಆಗಿದೀಯ?'' ಎಂದು ಕೇಳಿದೆ.

''ಅಲ್ವೋ, ಕೊರೊನಾ ಇದ್ದೋರ ಸಂಪರ್ಕಕ್ಕೆ ನಾವು ಬಂದರೆ, ವೈರಸ್ ಎಷ್ಟು ದಿನಕ್ಕೆ ಅಟ್ಯಾಕ್ ಮಾಡತ್ತೋ?'' ಎಂದು ಕೇಳಿದ.

''ಸಾಧಾರಣ ನಾಲ್ಕೈದು ದಿನಗಳಲ್ಲಿ ಸಿಂಪ್ಟಮ್ಸ್ ಗೊತ್ತಾಗುತ್ತೆ. ಯಾಕೆ?'' ಎಂದು ಕೇಳಿದೆ.

''ನಮ್ ನೆಂಟ ಒಬ್ಬ ಬಂದು ಹೋದ್ನಯ್ಯಾ ಈಗ. ಒಂದು ಗಂಟೆ ಕೂತು ಹರಟೆ ಹೊಡ್ದು, ಕಾಫಿ ಕುಡ್ದು ಹೋದ. ಹೋಗೋವಾಗ 'ಮನೇಲಿ ಎಲ್ರಿಗೂ ಕೊರೊನಾ ಪಾಸಿಟೀವ್ ಬಂದ್ಬಿಟ್ಟಿದೆ. ಯಾರೂ ಎಲ್ಲೂ ಹೋಗೋ ಹಾಗಿಲ್ಲ. ನಂಗೆ ಮನೆಲಿದ್ದೂ ಇದ್ದು ಬೇಜಾರಾಗಿತ್ತು. ಅದಕ್ಕೇ ನಿನ್ನನ್ನ ಮಾತಾಡ್ಸಿ ಹೋಗೋಣಾಂತ ಬಂದೆ. ಚೆನ್ನಾಗಿ ಟೈಂ ಪಾಸ್ ಆಯ್ತು. ಥ್ಯಾಂಕ್ಸ್' ಅಂತ ಹೇಳಿ ಹೋದ್ನಯ್ಯಾ. ಹಾಳಾದೋನು ವರ್ಷಗಳಿಂದ ಮನೆಗೆ ಬಂದಿರ್ಲಿಲ್ಲ. ಇವತ್ತು ಬಂದು, ಹೀಗ್ಮಾಡಿ ಹೋದ'' ಅಂತ ಗೋಳಾಡಿದ ಸೀನ. ''ನಿಂದೊಳ್ಳೆ ಪರೀಕ್ಷಿತನ ಕಥೆ ಆಯ್ತಲ್ಲೋ'' ಅಂದೆ. ಅವನಿಗೇನೂ ಅರ್ಥವಾದ ಹಾಗೆ ಕಾಣಲಿಲ್ಲ. ಆದರೂ ''ಹೂಂ'' ಎಂದ.

ಗವಾಕ್ಷಿಗಳನ್ನೆಲ್ಲಾ ಮುಚ್ಚಿಸಿಬಿಟ್ಟರೂ, ಮುಂಬಾಗಿಲಿಂದಲೂ ಬರಬಲ್ಲೆ ಅನ್ನೋದನ್ನು ಪಿಶಾಚಿ ಸಾಬೀತು ಮಾಡಿಬಿಟ್ಟಿತ್ತು!

**ಕೆ.ಪಿ. ಸತ್ಯನಾರಾಯಣ**

ಮೈಸೂರು ಬ್ಯಾಂಕಿನ ನಿವೃತ್ತ ಉದ್ಯೋಗಿ. ಕನ್ನಡ ಪತ್ರಿಕೆಗಳಲ್ಲಿ ಛಾಯಾಚಿತ್ರಗಳು, ಚಿತ್ರಲೇಖನಗಳು, ಕಥೆಗಳು, ಹಾಸ್ಯಲೇಖನಗಳು, ಲಲಿತ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. 'ಚುರುಮುರಿ' ಎಂಬ ಪ್ರಬಂಧಗಳ ಸಂಕಲನ, 'ಅಮೂಲ್ಯ ಉಡುಗೊರೆ' ಕಥಾಸಂಕಲನ ಪ್ರಕಟವಾಗಿವೆ. ಆಕಾಶವಾಣಿ ಹಾಗೂ ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಹಾಸನದಲ್ಲಿ ನೆಲೆಸಿದ್ದಾರೆ.